**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ ರವರು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉನ್ನತ ಶಿಕ್ಷಣ ಸಚಿವರ ಉತ್ತರ**

**ಸೂಚನೆ**

**ಕೆ.ಎಲ್.ಇ ಸಂಸ್ಥೆ ಬೆಳಗಾವಿ ಇವರು ನಡೆಸುತ್ತಿದ್ದ ಅನುದಾನಿತ ಬಿ.ವಿ.ಬಿ ಇಂಜಿನಿಯರಿಂಗ್ ಕಾಲೇಜು ಹುಬ್ಬಳ್ಳಿಯನ್ನು ಕೆ.ಎಲ್.ಇ ಟೆಕ್ನಾಲಜಿಕಲ್ ವಿಶ್ವವಿದ್ಯಾಲಯ ಎಂದು ಪರಿವರ್ತನೆ ಮಾಡಿದ ಕಾರಣಕ್ಕಾಗಿ ಅಲ್ಲಿಯ ಸಿಬ್ಬಂದಿಗಳು ಬೀದಿಗೆ ಬಿದ್ದು ಕಳೆದ 05 ತಿಂಗಳುಗಳಿಂದ ವೇತನವಿಲ್ಲದೇ ಆರ್ಥಿಕ ತೊಂದರೆ ಎದುರಿಸುತ್ತಿರುವ ಗಂಭೀರ ಸಮಸ್ಯೆಯ ಕುರಿತು.**

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ: ಇಡಿ 447 ಯುಆರ್‌ಸಿ 2023, ದಿನಾಂಕ:21.02.2024ರನ್ವಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ ಈ ಸಂಸ್ಥೆಯಲ್ಲಿ ನಡೆಸಲಾಗುತ್ತಿದ್ದ ಅನುದಾನಿತ ಕೋರ್ಸುಗಳನ್ನು ಮುಚ್ಚಲು ಮತ್ತು ಸದರಿ ಕೋರ್ಸ್‌ಗಳಲ್ಲಿ ಈಗಾಗಲೇ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು 2025-26ನೇ ಶೈಕ್ಷಣಿಕ ಸಾಲಿನ ಅಂತ್ಯಕ್ಕೆ ಕೋರ್ಸ್ ಪೂರ್ಣಗೊಳ್ಳುವವರೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಡಿಯಲ್ಲಿಯೇ ಮುಂದುವರೆಸಲು ಆದೇಶಿಸಿದೆ. ಹಾಗೆಯೇ, 2025-26ನೇ ಸಾಲಿಗೆ ಮುಂಚಿತವಾಗಿ ಬಿ.ವಿ.ಬಿ. ಸಂಸ್ಥೆಯ ಅನುದಾನಿತ ಸಿಬ್ಬಂದಿಗಳ ಕಾರ್ಯಭಾರವು ಕಡಿಮೆಯಾಗುವುದರಿಂದ ಹೆಚ್ಚುವರಿ ಸಿಬ್ಬಂದಿಗಳನ್ನು ಹಂತ ಹಂತವಾಗಿ ಇತರೆ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ನಿಗದಿತ ಅವಧಿಯೊಳಗಾಗಿ ಸ್ಥಳಾಂತರಿಸಲು ಆದೇಶಿಸಲಾಗಿದೆ.

ಸದರಿ ಆದೇಶದನ್ವಯ, ಮೊದಲ ಮತ್ತು ಎರಡನೆಯ ಹಂತದಲ್ಲಿ ಸ್ಥಳಾಂತರ ಮಾಡಬೇಕಾದ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನ ಅನುದಾನಿತ ಸಿಬ್ಬಂದಿಗಳನ್ನು ಆದೇಶ ಸಂಖ್ಯೆ: ಡಿಟಿಇ 09 ಇಎಸ್‌ಟಿ (14) 2024 ದಿ:29.06.2024 ರನ್ವಯ ಸದರಿಯವರು ಆಯ್ಕೆ ಮಾಡಿಕೊಂಡ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಈ ಕೆಳಕಂಡಂತೆ ವರ್ಗಾಯಿಸಿ ಆದೇಶಿಸಲಾಗಿತ್ತು.

**ಮೊದಲನೆಯ ಹಂತದಲ್ಲಿ ದಿನಾಂಕ:01.07.2024 ರಿಂದ ಅನ್ವಯಿಸುವಂತೆ ವರ್ಗಾಯಿಸಿರುವ ಸಿಬ್ಬಂದಿಗಳ ವಿವರ**

| ಕ್ರ ಸಂ | ಸಿಬ್ಬಂದಿಯ ಹೆಸರು | ಪದನಾಮ | ವಿಭಾಗ | ವರ್ಗಾಯಿಸಲಾದ ಸಂಸ್ಥೆಯ ಹೆಸರು |
|---|---|---|---|---|
| 1 | ಶ್ರೀ ಎಸ್.ಡಿ. ಕೋಕಣೆ | ಡ್ರಾಫ್ಟ್ಸಮನ್ | ಸಿವಿಲ್ | ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು ಬೆಂಗಳೂರು |
| 2 | ಶ್ರೀ ಬಿ.ಆರ್.ಅಲ್ಲಮ್ಮನವರ್ | ಸಹಾಯಕ ಬೋಧಕರು | ಮೆಕ್ಯಾನಿಕಲ್ | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ |
| 3 | ಶ್ರೀ ವಿ.ಹೆಚ್. ಶಿರಗುಪ್ಪಿ | ಮೆಕ್ಯಾನಿಕ್ | ಮೆಕ್ಯಾನಿಕಲ್ | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ (ಖಾಲಿ ಇರುವ ನೇರ ನೇಮಕಾತಿ ಹುದ್ದೆಗೆದುರಾಗಿ) |

| | | | | |
|---|---|---|---|---|
| 4 | ಶ್ರೀ ಎಸ್.ಎಸ್. ವಾಲ್ಮೀಕಿ | ಹೆಲ್ಪರ್ | ಮೆಕ್ಯಾನಿಕಲ್ | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ |
| 5 | ಶ್ರೀ ಆರ್.ವಿ.ಗೌಡರ್ | ಫೋರ್ಮನ್ | ಇ & ಸಿ | ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| 6 | ಶ್ರೀ ಎ.ಎನ್. ಮರಳಿಹಳ್ಳಿ | ಹೆಲ್ಪರ್ | ಇ & ಇ | ಡಾ. ಅಂಬೇಡ್ಕರ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| 7 | ಡಾ. ಎನ್.ಆರ್. ಪಾಟೀಲ್ | ಸಹಾಯಕ ಪ್ರಾಧ್ಯಾಪಕರು | ಭೌತಶಾಸ್ತ್ರ | ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| 8 | ಶ್ರೀಮತಿ ಎಸ್ಎನ್. ಹಿರೇಮಠ್ | ದ್ವಿ.ದ.ಸ. | ಆಡಳಿತ | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ (ಖಾಲಿ ಇರುವ ನೇರ ನೇಮಕಾತಿ ಹುದ್ದೆಗೆದುರಾಗಿ) |
| 9 | ಶ್ರೀ ಪಿ.ಬಿ. ಸನದಿ | ದ್ವಿ.ದ.ಸ. | ಆಡಳಿತ | |
| 10 | ಶ್ರೀ ಎಸ್.ಆರ್.ಚಕಲಬ್ಬಿ | ದ್ವಿ.ದ.ಸ. | ಆಡಳಿತ | |

**ಎರಡನೇ ಹಂತದಲ್ಲಿ ದಿನಾಂಕ:31.07.2024 ರಿಂದ ಅನ್ವಯಿಸುವಂತೆ ವರ್ಗಾಯಿಸಿರುವ ಸಿಬ್ಬಂದಿಗಳ ವಿವರ**

| ಕ್ರ ಸಂ | ಸಿಬ್ಬಂದಿಯ ಹೆಸರು | ಪದನಾಮ | ವಿಭಾಗ | ವರ್ಗಾಯಿಸಲಾದ ಸಂಸ್ಥೆಯ ಹೆಸರು |
|---|---|---|---|---|
| 1 | ಶ್ರೀ ಹೆಚ್.ಎಂ. ಕೆಳಗಡಿ | ಸಹಾಯಕ ಪ್ರಾಧ್ಯಾಪಕರು | ಇ & ಸಿ | ಡಾ.ಅಂಬೇಡ್ಕರ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು |
| 2 | ಡಾ. ಜಿ.ಬಿ.ಮರಳಿ | ಸಹಾಯಕ ಪ್ರಾಧ್ಯಾಪಕರು | ಗಣಿತ | ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಮೈಸೂರು |

ಮೇಲ್ಕಂಡ ಆದೇಶದಂತೆ ಡಾ. ಅಂಬೇಡ್ಕರ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಇಲ್ಲಿಗೆ ವರ್ಗಾಯಿಸಲಾದ 02 ಸಿಬ್ಬಂದಿಗಳನ್ನು ಕಾರ್ಯ ವರದಿ ಮಾಡಿಸಿಕೊಂಡಿರುತ್ತಾರೆ. ಉಳಿದಂತೆ, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು (03), ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ (06) ಮತ್ತು ಎಸ್.ಜೆ.ಸಿ.ಇ., ಮೈಸೂರು (01) ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟ ಒಟ್ಟು 10 ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕಾರ್ಯವರದಿ ಮಾಡಿಸಿಕೊಂಡಿರುವುದಿಲ್ಲ.

ಈ ರೀತಿ ಕಾರ್ಯವರದಿ ಮಾಡಿಸಿಕೊಳ್ಳದ ಸಂಸ್ಥೆಗಳಿಗೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರಿಂದ ದಿನಾಂಕ:11.07.2024, 08.08.2024 ಮತ್ತು 28.10.2024 ರಲ್ಲಿ ಪತ್ರ / ನೋಟೀಸ್‌ಗಳನ್ನು ಜಾರಿ ಮಾಡಲಾಗಿದೆ. ಆದರೆ, ಪ್ರಾಂಶುಪಾಲರು, ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ ಇವರು, ಸದರಿ ಸಂಸ್ಥೆಯನ್ನು ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಲು ಯು.ಜಿ.ಸಿ.ಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿರುವುದರಿಂದ ಹಾಗೂ ಪ್ರಾಂಶುಪಾಲರು, ಎಸ್.ಜೆ.ಸಿ.ಇ., ಮೈಸೂರು ಇವರು ಸಂಸ್ಥೆಯಲ್ಲಿನ ಖಾಲಿ ಹುದ್ದೆಗಳನ್ನು ಆಡಳಿತ ಮಂಡಳಿಯ ವತಿಯಿಂದ ಭರ್ತಿ ಮಾಡಿದ್ದು ಅನುದಾನಿತ ಹುದ್ದೆಗಳು ಖಾಲಿ ಇಲ್ಲದ ಕಾರಣ ಸಿಬ್ಬಂದಿಗಳನ್ನು ಬೇರೆ ಅನುದಾನಿತ ಸಂಸ್ಥೆಗೆ ವರ್ಗಾಯಿಸುವಂತೆ ಕೋರಿರುತ್ತಾರೆ. ಮುಂದುವರಿದು, ಪ್ರಾಂಶುಪಾಲರು, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಇವರು ಮೇಲ್ಕಂಡ ವರ್ಗಾವಣೆ ಆದೇಶ ದಿನಾಂಕ: 29.06.2024 ನ್ನು ವಜಾಗೊಳಿಸುವಂತೆ

ದಿನಾಂಕ: 19.08.2024 ರಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 23132/2024 ನ್ನು ದಾಖಲಿಸಿದ್ದು, ಪ್ರಕರಣ ವಿಚಾರಣೆಯ ಹಂತದಲ್ಲಿರುತ್ತದೆ.

ಈ ನಡುವೆ, ದಿನಾಂಕ:01.07.2024 ರಿಂದ ಅನ್ವಯಿಸುವಂತೆ ವರ್ಗಾಯಿಸಲ್ಪಟ್ಟ ಶ್ರೀ ಎಸ್.ಡಿ. ಕೋಕಣಿ, ಡ್ರಾಫ್ಟ್‌ಮನ್, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಇವರು ದಿನಾಂಕ:31.07.2024ರಂದು ವಯೋ ನಿವೃತ್ತರಾಗಿರುವುದರಿಂದ ಇವರನ್ನು ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನಲ್ಲಿಯೇ ನಿವೃತ್ತರಾಗಿದ್ದಾರೆಂದು ಪರಿಗಣಿಸಿ ಆ ಸಂಸ್ಥೆಯಿಂದಲೇ ನಿವೃತ್ತಿ ವೇತನ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸುವಂತೆ ಬಿ.ವಿ.ಬಿ. ಸಂಸ್ಥೆಯ ಪ್ರಾಂಶುಪಾಲರಿಗೆ ಸೂಚಿಸಲು ಕ್ರಮವಹಿಸಲಾಗುತ್ತಿದೆ. ಹಾಗೆಯೇ, ಶ್ರೀ ಎಸ್. ಆರ್.ಚಕಲಬ್ಬಿ, ದ್ವಿ.ದ.ಸ. ಮತ್ತು ಶ್ರೀ ಎಸ್.ಎನ್. ಹಿರೇಮಠ, ದ್ವಿ.ದ.ಸ. ಇವರು ಸ್ವಇಚ್ಛಾ ನಿವೃತ್ತಿ ಕೋರಿ ಮನವಿ ಸಲ್ಲಿಸಿದ್ದು ಸದರಿ ಪ್ರಸ್ತಾವನೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕ್ರಮ ವಹಿಸಲಾಗುತ್ತಿದೆ.

ಕರ್ನಾಟಕ ಶಿಕ್ಷಣ ಅಧಿನಿಯಮ 1983 ರ ನಿಯಮ 133 (3) ರನ್ವಯ ಸರ್ಕಾರವು ಅವಶ್ಯಕವೆಂದು ಅಭಿಪ್ರಾಯಪಟ್ಟು ನೀಡುವ ನಿರ್ದೇಶನಗಳನ್ನು ಸಂಬಂಧಪಟ್ಟ ಪ್ರಾಧಿಕಾರಿಗಳು ಪಾಲಿಸುವುದು ಅವುಗಳ ಕರ್ತವ್ಯವಾಗಿರುತ್ತದೆ. ತಾಂತ್ರಿಕ ಶಿಕ್ಷಣ ಇಲಾಖೆಯ ಅನುದಾನ ಸಂಹಿತೆಯ ನಿಯಮ 9(vii) ರನ್ವಯ ಸರ್ಕಾರವು ಕೈಗೊಳ್ಳುವ ನೀತಿ-ನಿರ್ಧಾರಗಳನ್ನು ಅನುದಾನಿತ ಸಂಸ್ಥೆಗಳು ಪಾಲಿಸಬೇಕಾಗಿರುತ್ತದೆ. ಆದರೆ ಸದರಿ ಸಂಸ್ಥೆಗಳು ಸರ್ಕಾರ / ಆಯುಕ್ತಾಲಯದ ಆದೇಶವನ್ನು ಪಾಲಿಸಿರುವುದಿಲ್ಲ ಹಾಗೂ ನೋಟೀಸ್ ಜಾರಿ ಮಾಡಿದಾಗ್ಯೂ ಸಹ ಸಿಬ್ಬಂದಿಗಳನ್ನು ಕಾರ್ಯ ವರದಿ ಮಾಡಿಸಿಕೊಂಡಿರುವುದಿಲ್ಲ.

ಹೀಗಾಗಿ, ಮೇಲ್ಕಂಡ ಸಂಸ್ಥೆಯಿಂದ ಸರ್ಕಾರವು ವರ್ಗಾವಣೆ ಮಾಡಿರುವ ನೌಕರರನ್ನು ವರದಿ ಮಾಡಿಸಿಕೊಳ್ಳದ ಅನುದಾನಿತ ಶಿಕ್ಷಣ ಸಂಸ್ಥೆಗಳ ವಿರುದ್ಧ ಕೈಗೊಳ್ಳಬಹುದಾದ ಕ್ರಮಗಳು, ಇವರಿಗೆ ಬಾಕಿ ಇರುವ ಸಂಬಳ ವಿತರಿಸುವ ಬಗ್ಗೆ ಹಾಗೂ ಭವಿಷ್ಯದಲ್ಲಿ ಈ ರೀತಿಯ ಸಂದರ್ಭ ಉದ್ಭವಿಸಿದಲ್ಲಿ ಯಾವ ರೀತಿಯ ಕ್ರಮ ವಹಿಸಬೇಕೆಂಬ ಬಗ್ಗೆ ಸರ್ಕಾರದ ಹಂತದಲ್ಲಿ ಸಭೆ ನಡೆಸಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು.

**<u>ಸಂಖ್ಯೆ:ಇಡಿ 44 ಟಿಜಿಎಲ್ 2024</u>**

(ಡಾ.ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು